ಲೋಹಿಯಾ: ನಾನು ನನ್ನ ಭಾಷಣದಲ್ಲಿ ಬಳಸಿದ್ದು ‘ಇಂಪೀರಿಯಲ್’ ಎಂಬ ಪದವನ್ನೋ, ಅಥವಾ ಇನ್ನಾವುದಾದರೂ ಪದವನ್ನೋ?

ಮ್ಯಾಜಿಸ್ಟ್ರೇಟ್: ಅದನ್ನು ಅವನು ಹೇಗೆ ಹುಡುಕಿ ಹೇಳಬಲ್ಲ?

ಲೋಹಿಯಾ: ಸಾಧ್ಯವಿದೆ. ಶಾರ್ಟ್ ಹ್ಯಾಂಡ್‌ನಲ್ಲಿ ಬರೆದುಕೊಳ್ಳುವವರಿಗೆ ‘ಮಾರಲ್’ ಹಾಗೂ ‘ಇಂಪೀರಿಯಲ್’ ಎರಡೂ ಒಂದೇ ಥರ ಕೇಳಿಸಿರುವ ಸಾಧ್ಯತೆ ಇರುತ್ತದೆ.

ಮ್ಯಾಜಿಸ್ಟ್ರೇಟ್: (ಸರ್ಕಾರಿ ಲಿಪಿಕಾರನಿಗೆ) ನೋಡ್ರೀ ಆ ಪದ ‘ಮಾರಲ್’ ಇರಬಹುದು.

ಸರ್ಕಾರಿ ಲಿಪಿಕಾರ: ‘ಮಾರಲ್’ ಇರಬಹುದು ಅನ್ನಿಸುತ್ತೆ...

ತಮ್ಮ ಭಾಷಣದಲ್ಲಿ ಲೋಹಿಯಾ ಯುದ್ಧದ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆಯ ಅಗತ್ಯವನ್ನು ಒತ್ತಿ ಹೇಳಿದ್ದರು; ಸರ್ಕಾರಿ ವರದಿಯಲ್ಲಿ ‘ಅಹಿಂಸೆ’ ಎಂಬ ಪದದ ಪ್ರಸ್ತಾಪವೇ ಇರಲಿಲ್ಲ!

ಲೋಹಿಯಾ: ನನ್ನ ಭಾಷಣದಲ್ಲಿ ನಾನು ಎಷ್ಟು ಪದಗಳನ್ನು ಬಳಸಿದ್ದೇನೆ?

ಸರ್ಕಾರಿ ಲಿಪಿಕಾರ: (ಚಣ ಬಿಟ್ಟು) ಸುಮಾರು 6000 ಪದಗಳು.

ಲೋಹಿಯಾ: ನನ್ನ ಅಂದಾಜಿನ ಪ್ರಕಾರ, ಅವು ಸುಮಾರು 8000–9000 ಪದಗಳು. ನೀವು ವರದಿ ಮಾಡಿರುವುದು 4000 ಪದಗಳು.

ಲೋಹಿಯಾ ನಡೆಸಿದ ಪಾಟಿ ಸವಾಲು ಪೊಲೀಸ್ ಇಲಾಖೆ ‘ದೇಶದ್ರೋಹ’ದ ಪ್ರಕರಣಗಳನ್ನು ಸೃಷ್ಟಿಸುವ ವೈಖರಿಯನ್ನು, ಪೊಲೀಸ್ ಇಲಾಖೆಯ ಸಂಚನ್ನು ಬಯಲು ಮಾಡಿತು!

ಕೇಸ್ ದಾಖಲಿಸಿದ ಇನ್‌ಸ್ಪೆಕ್ಟರನ್ನೂ ಲೋಹಿಯಾ ಪಾಟಿ ಸವಾಲಿಗೆ ಒಳಪಡಿಸಿದರು.

ಇನ್‌ಸ್ಪೆಕ್ಟರ್: ನಾನು ಬಂಗಾಳ ಸರ್ಕಾರದ ಆಜ್ಞೆಯ ಪ್ರಕಾರ ಈ ಕೆಲಸ ಮಾಡಿದ್ದೇನೆ.

ಲೋಹಿಯಾ: (ಮ್ಯಾಜಿಸ್ಟ್ರೇಟರಿಗೆ) ನಮ್ಮ ಭಾಷಣಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ, ಚಳಿಗಾಲದಲ್ಲಿ ಹೆಚ್ಚು ನಡೆಯುತ್ತಿರುತ್ತವೆ. ಆದರೆ ‘ರಾಜದ್ರೋಹ’ದ ಕೇಸುಗಳು ‘ಋತುಆಧಾರಿತ’ ಚಟುವಟಿಕೆಗಳಾಗಿವೆ ಅನ್ನಿಸುತ್ತಿದೆ! ಮಳೆಗಾಲದಲ್ಲಿ ಸರ್ಕಾರ ಹೆಚ್ಚಿನ ಸಂಖ್ಯೆಯ ರಾಜದ್ರೋಹದ ಕೇಸುಗಳನ್ನು ಹಾಕುತ್ತದೆ. ಒಂದೋ, ಈಗ ಜನರಲ್ಲಿ ರಾಜದ್ರೋಹದ ಮನೋಭಾವ ಹೆಚ್ಚಾಗಿರಬೇಕು; ಇಲ್ಲಾ ಸರ್ಕಾರದ ಪಾಲಿಸಿ ಬದಲಾಗಿರಬೇಕು. ಗೃಹಮಂತ್ರಿ ಇಲ್ಲಿ ಬಂದು ಈ ಕುರಿತು ನಮಗೆ ಜ್ಞಾನೋದಯವನ್ನುಂಟು ಮಾಡಬೇಕು! ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಯಾಕೆ ರಾಜದ್ರೋಹದ ಕೇಸುಗಳಿರಲಿಲ್ಲ? ಜುಲೈ ತಿಂಗಳಲ್ಲಿ ಇಷ್ಟೊಂದು ರಾಜದ್ರೋಹದ ಕೇಸುಗಳನ್ನು ದಾಖಲಿಸಿರುವುದು ಯಾಕೆ?

ಬ್ರಿಟಿಷ್ ಸರ್ಕಾರ ತನ್ನ ರಕ್ಷಣೆಗಾಗಿ ಮಾಡಿಕೊಂಡಿದ್ದ ‘ರಾಜದ್ರೋಹ’ ಕಾನೂನಿನ ಪ್ರಕಾರ, ಬ್ರಿಟಿಷ್ ಸರ್ಕಾರ ಭಾಗಿಯಾಗಿದ್ದ ಯುದ್ಧವನ್ನು ಒಪ್ಪದಿದ್ದವರೆಲ್ಲ ‘ರಾಜದ್ರೋಹಿ’ಗಳಾಗಿದ್ದರು! ಬ್ರಿಟನ್ನಿನಲ್ಲಿ ಸರ್ಕಾರದ ವಿರುದ್ಧ ಯಾರೂ ಸೊಲ್ಲೆತ್ತದಿರಲಿ ಎಂಬ ದುರುದ್ದೇಶದಿಂದ ಬ್ರಿಟಿಷರು ಮಾಡಿಕೊಂಡಿದ್ದ ಈ ಕಾನೂನು ಇಂಡಿಯಾದಲ್ಲಿ ಅವರಿಗೆ ಮತ್ತಷ್ಟು ಅನುಕೂಲಕರವಾಗಿತ್ತು!

ಈ ರಾಜದ್ರೋಹದ ಬ್ರಿಟಿಷ್ ಕಾನೂನು ಇವತ್ತಿಗೂ ಭಾರತದಲ್ಲಿದೆ; ಅಂದರೆ, ಸ್ವಾತಂತ್ರ್ಯದ ನಂತರದ ಸರ್ಕಾರಗಳು ಕೂಡ ವಸಾಹತುಶಾಹಿಯ ಗುಲಾಮರಂತೆಯೇ ವರ್ತಿಸುತ್ತಿವೆ; ಈ ಕಾನೂನು ಎಲ್ಲ ಆಳುವ ಸರ್ಕಾರಗಳಿಗೂ ತಮಗೆ ವಿರುದ್ಧವಾಗಿ ಮಾತಾಡುವವರನ್ನು ಶಿಕ್ಷಿಸಲು ಅನುಕೂಲಕರವಾಗಿದೆ ಎಂದೇ ಇದರ ಅರ್ಥ!

ಮ್ಯಾಜಿಸ್ಟ್ರೇಟರು ಪ್ರಕರಣವನ್ನು ಮುಂದೂಡಿದರು. ವಿಚಾರಣೆ ಮುಂದುವರಿಯಿತು. ಲೋಹಿಯಾರನ್ನು ಖುಲಾಸೆ ಮಾಡಿದ ಮ್ಯಾಜಿಸ್ಟ್ರೇಟರು ವಕೀಲರನ್ನು ನೇಮಿಸಿಕೊಳ್ಳದೆ ತಾವೇ ವಾದ ಮಾಡಿದ್ದ ಲೋಹಿಯಾರ ವಾದಸಾಮರ್ಥ್ಯವನ್ನು ಮೆಚ್ಚುತ್ತಾ, ‘ನೀವೇನಾದರೂ ಬ್ಯಾರಿಸ್ಟರ್ ಆಗಿದ್ದರೆ ಅತ್ಯಂತ ಯಶಸ್ವಿಯಾಗಿರುತ್ತಿದ್ದಿರಿ’ ಎಂದರು.

ಖುಲಾಸೆಯಾದ ನಂತರ, ಮಹಾಯುದ್ಧದಲ್ಲಿ ಕಾಂಗ್ರೆಸ್ ಸ್ಪಷ್ಟವಾದ ಯುದ್ಧವಿರೋಧಿ ನಿಲುವು ತಳೆಯಬೇಕೆಂದು ಲೋಹಿಯಾ ಮತ್ತೆ ಒತ್ತಾಯಿಸಿದರು. ‘ಫ್ರಾನ್ಸ್ ಹಾಗೂ ಇಂಗ್ಲೆಂಡ್ ವಸಾಹತುಗಳ ಜನರನ್ನು ಹೇಗೆ ಕಟ್ಟಿ ಹಾಕಿವೆಯೆಂದರೆ, ಅವರು ಜಪಾನನ್ನು ಎದುರಿಸುವ ಶಕ್ತಿಯನ್ನೇ ಕಳೆದುಕೊಂಡಿದ್ದಾರೆ’; ಆದ್ದರಿಂದ ‘ಈ ಯುದ್ಧವನ್ನು ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಿರುದ್ಧದ ಸ್ವಾತಂತ್ರ್ಯ ಚಳುವಳಿಯಾಗಿ ಪರಿವರ್ತಿಸಬೇಕು’ ಎಂದು ಲೋಹಿಯಾ ‘ಹರಿಜನ್’ ಪತ್ರಿಕೆಯಲ್ಲಿ ಬರೆದರು.

ಯುದ್ಧವನ್ನು ಪೂರ್ಣ ವಿರೋಧಿಸಲು ಕಾಂಗ್ರೆಸ್ ಸಿದ್ಧವಿರಲಿಲ್ಲ. ಬದಲಿಗೆ, ಪ್ರತಿಭಟನೆಯ ಸಂಕೇತವಾಗಿ ಪ್ರಾಂತೀಯ ಸರ್ಕಾರಗಳು ರಾಜೀನಾಮೆ ಕೊಡುವಂತೆ ಸೂಚಿಸಿತು. ಪ್ರಾಂತೀಯ ಸರ್ಕಾರಗಳು ರಾಜೀನಾಮೆ ಕೊಟ್ಟ ತಕ್ಷಣ ರಾಜ್ಯಪಾಲರುಗಳ ಸರ್ವಾಧಿಕಾರ ಶುರುವಾಯಿತು; ರಾಜ್ಯಪಾಲರುಗಳು ಒತ್ತಾಯದಿಂದ ಜನರಿಂದ ಯುದ್ಧಕಾಣಿಕೆಗಳನ್ನು ವಸೂಲು ಮಾಡಲು ಶುರು ಮಾಡಿದರು. ಲೋಹಿಯಾ ರಾಜ್ಯಪಾಲರುಗಳ ದಬ್ಬಾಳಿಕೆಯನ್ನು

